

# ಕಾಲುನಡಿಗೆ, ಕಾಲುವೆ ಕ್ಯಾನ್ವಾಸ್‌ನ 'ಆಮ್‌ಸ್ಟರ್‌ಡ್ಯಾಂ'

**ಸಾಂಪ್ರದಾಯಿಕತೆ ಹಾಗೂ ಆಧುನಿಕತೆಯ ಮೆರುಗು ಎರಡೂ ಮೇಳೈಸಿದ ನಗರ ಹಾಲೆಂಡ್‌ನ ಆಮ್‌ಸ್ಟರ್‌ಡ್ಯಾಂ. ಇಲ್ಲಿ ನಡೆದು ನಗರ ನೋಡಬೇಕು, ಕಾಲುವೆಯಲ್ಲಿ ಪಯಣಿಸಿಯೂ ಊರು ಸುತ್ತಬೇಕು. ನೋಡಿದಷ್ಟೂ ಮುಗಿಯದ ವಸ್ತು ಸಂಗ್ರಹಾಲಯಗಳನ್ನು ತುಂಬಿಕೊಂಡಿರುವ ಇಡೀ ಊರೇ ಒಂದು ಅಪೂರ್ವ ಮ್ಯೂಸಿಯಂನಂತಿದೆ.**

**■ ಡಾ. ಕೆ.ಎಸ್. ಪವಿತ್ರ**

ಐ ಆಮ್ ಆಮ್‌ಸ್ಟರ್‌ಡ್ಯಾಂ .........!

**I AMsterdam** – ಅಕ್ಷರಗಳ ದೊಡ್ಡ ಫಲಕ, ಅಕ್ಷರಗಳನ್ನೇ ದೊಡ್ಡದಾಗಿ ಕಡೆದು ನಿಲ್ಲಿಸಿದ ಕಲಾಕೃತಿಗಳು ಎಲ್ಲೆಡೆ. ನನ್ನ ಜೊತೆ ನೆದರ್‌ಲ್ಯಾಂಡ್ಸ್‌ಗೆ ಪಯಣಿಸಿದ್ದ 'ಡಚ್' ಮನುಷ್ಯ – 'ಇದು ಆಮ್‌ಸ್ಟರ್‌ಡ್ಯಾಂ ಅಲ್ಲ, ಆಮ್‌ಸ್ತರ್ ದಾಂ' ಎಂದು ತಿದ್ದಿದ! ನನ್ನ ಮಗ ಭರತ 'ಆಮ್‌ಸ್ತರ್ ದಾಂ! ಇವರಿಗೆಲ್ಲಾ ಟ, ಡ ಎಲ್ಲಾ ಬರೋದೇ ಇಲ್ಲ ಅನ್ನಿಸುತ್ತೆ. ವಾತರ್, ವಾತರ್' ಅಂತ ಅನ್ನಾತರಪ್ಪ' ಎಂದು ತನ್ನ ತೀರ್ಪು ನೀಡಿದ್ದ.

ನಾವು 9 ಗಂಟೆಗಳ ಪ್ರಯಾಣ ಮಾಡಿ ನೆದರ್‌ಲ್ಯಾಂಡ್‌ನ ರಾಜಧಾನಿಗೆ ಬಂದಿಳಿದಿದ್ದೆವು. ಹಾಲೆಂಡ್ ಎಂದೂ ಕರೆಯಲ್ಪಡುವ ನೆದರ್‌ಲ್ಯಾಂಡ್‌ನ ರಾಜಧಾನಿ ಆಮ್‌ಸ್ಟರ್ ಡ್ಯಾಂ. 'ಡಚ್' ಇಲ್ಲಿನ ಜನರ ಅಧಿಕೃತ ಭಾಷೆ. ಆದರೂ ನೂರಕ್ಕೆ 90ರಷ್ಟು ಜನ ಇಂಗ್ಲಿಷ್ ಮಾತನಾಡುತ್ತಾರೆ.

ಒಂದೆಡೆ 17ನೇ ಶತಮಾನದ ಎತ್ತರೆತ್ತರದ ಕಟ್ಟಡಗಳು, ಕೆನಾಲ್‌ಗಳು. ಇನ್ನೊಂದೆಡೆ ಅತ್ಯಾಧುನಿಕ ಕೆಫೆಗಳು ಹೀಗೆ ಸಾಂಪ್ರದಾಯಿಕತೆ – ಆಧುನಿಕತೆಗಳ ಸಂಗಮ! ರಸ್ತೆಗಳಲ್ಲಿಯೂ ಅಷ್ಟೆ – ಟ್ರ್ಯಾಮ್, ಬಸ್‌ಗಳು, ಕಾರುಗಳು ಇವುಗಳಿಗೆ ಒಂದು ದೊಡ್ಡ ರಸ್ತೆ. ಅದರ ಪಕ್ಕ ಕಿರಿದಾಗಿ ಒಂದು ಸೈಕಲ್ ರಸ್ತೆ. ಅದರ ಪಕ್ಕ 'ಫುಟ್‌ಪಾತ್'! ಇಲ್ಲಿ ಯಾರನ್ನೂ ಸೈಕಲ್ ಮೇಲೆ ನೀವು ನೋಡಬಹುದು. ಅಜ್ಜ–ಅಜ್ಜಿ–ಅಮ್ಮ–ಮಗಳು, ಅಪ್ಪ, ಎಲ್ಲರನ್ನೂ ಸೈಕಲ್‌ಗಳ ಮೇಲೆ ನೋಡಿ ನಾವು ಕಣ್ಣರಳಿಸಿದೆವು.

ಸೈಕಲ್ ಹೊಡೆಯುವಂತೆಯೇ ಇಲ್ಲಿಯ ಜೀವನಶೈಲಿಯಲ್ಲಿ ನಡಿಗೆಯೂ ಬಹುಮುಖ್ಯ ಅಂಶ ಎಂಬುದು ಒಂದೇ ದಿನದಲ್ಲಿ ನಮಗೆ ಗೊತ್ತಾಯಿತು!